ವಿಷಯ : ಹೊಸದುರ್ಗ ತಾಲ್ಲೂಕಿನ ಮೊರಬಗಟ್ಟದಲ್ಲಿರುವ ಬಸವೇಶ್ವರ ಪ್ರೌಢ ಶಾಲೆಗೆ ಅನುದಾನ.

ಪ್ರ. 220 (161) ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಶಿಕ್ಷಣಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

(ಅ) ಹೊಸದುರ್ಗ ತಾಲ್ಲೂಕಿನ ಮೊರಬಗಟ್ಟದಲ್ಲಿ ನಡೆಯುತ್ತಿರುವ ಬಸವೇಶ್ವರ ಪ್ರೌಢ ಶಾಲೆ 1980–81 ನೇ ಸಾಲಿಗೆ ಐದು ವರ್ಷ ಗ್ರ್ಯಾಂಟ್ ಇಲ್ಲದೆ ನಡೆದು 1981–82 ನೇ ಸಾಲಿನಿಂದ ಅನುದಾನಕ್ಕೆ ಅರ್ಹವಾಗಿದ್ದರೂ ಅನುದಾನ ಮಂಜೂರು ಮಾಡದಿರಲು ಕಾರಣಗಳೇನು ;

(ಆ) ಶಾಲೆಗೆ ಮಂಜೂರಾತಿ ನೀಡುವಾಗ ವಿಧಿಸಿದ್ದ ಷರತ್ತುಗಳನ್ನೆಲ್ಲಾ ಪೂರ್ಣಗೊಳಿಸಿದ್ದಾರೆಯೇ ;

(ಇ) ಹಾಗಿಲ್ಲದಿದ್ದಲ್ಲಿ ಯಾವ ಷರತ್ತನ್ನು ಪೂರ್ಣಗೊಳಿಸಿಲ್ಲ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಆಡಳಿತ ಮಂಡಳಿಯು ಅನುದಾನ ಸಂಹಿತೆಯ ನಿಯಮಗಳನ್ನು ಪೂರೈಸಿಲ್ಲವಾದ್ದರಿಂದ.

(ಆ) ಇಲ್ಲ.

(ಇ) ಪೀಠೋಪಕರಣಗಳು, ಭೂಪಟಗಳು, ಪುಸ್ತಕ ಭಂಡಾರಗಳು, ಪ್ರಯೋಗ ಶಾಲೆಯ ಉಪಕರಣಗಳ ಕೊರತೆ.

ಶ್ರೀ ಜಿ. ಬಸಪ್ಪ.—ಗ್ರ್ಯಾಂಟ್ ಇನ್ ಏಯ್ಡ್ ಕೋಡ್ ಪ್ರಕಾರ ಅವರು ನಿಮ್ಮ ಎಲ್ಲ ಷರತ್ತುಗಳನ್ನೂ ಪೂರೈಸಿದ್ದರೂ ಗ್ರ್ಯಾಂಟ್ ಮಂಜೂರು ಮಾಡಿಕೊಡದೇ ಇರುವುದಕ್ಕೆ ಕಾರಣವೇನು ? ಈಗಲಾದರೂ ಮಂಜೂರು ಮಾಡಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಹಿಂದೆ ಏತಕ್ಕೆ ಮಂಜೂರು ಮಾಡಲಿಲ್ಲ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಜಿ. ಬಸಪ್ಪ.—ಗ್ರ್ಯಾಂಟ್ ಇನ್ ಏಯ್ಡ್ ರೂಲ್ಸ್ ಪ್ರಕಾರ ಎಲ್ಲ ಷರತ್ತುಗಳನ್ನೂ ಪೂರ್ತಿ ಮಾಡಿದ್ದರೂ, ಯಾವುದೇ ಕಾರಣವನ್ನೂ ತೋರಿಸದೆ ಅವರು ಗ್ರ್ಯಾಂಟನ್ನು ಮಂಜೂರು ಮಾಡಲಿಲ್ಲ. ಈ ರೀತಿ ಮಾಡುವುದಕ್ಕೆ ಕಾರಣವಾದರೂ ಏನು ?

ಶ್ರೀ ಬಿ. ರಾಚಯ್ಯ.—1981 ರಿಂದ ಈಚೆಗೆ ಏನು ಗ್ರ್ಯಾಂಟನ್ನು ಕೊಡಬೇಕೋ ಅದನ್ನು ಕೊಡಿಸುತ್ತೇನೆ. ಸರ್ಕಾರ ಅದನ್ನು ಒಪ್ಪಿಕೊಂಡಿದೆ. ಅದನ್ನು ನಾನು ಹೇಳಿದ್ದೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಕೊಡಲಾದ ಲಿಖಿತ ಉತ್ತರಗಳು

SRI A. LAKSHMISAGAR.—I beg to lay on the table of the House the 14th list of written answers.

Percentage of II Year P.U.C.

Sri K. H. Ranganath (Hiriyur).—

103 (158) Will the Minister for Education be pleased to state :—

(*a*) the total number of students that had appeared for the II P.U.C. during the years 1980–81, 1981–82, 1982–83 from the Colleges in the rural areas and the percentage of passings ;

(*b*) among the students passed in II P.U.C. from the colleges of rural areas how many have been able to get seats in various Professional Colleges *i.e.*. M.B.B.S., Engineering and University of Agriculture and their percentage to the total admission in the Government Colleges during the respective period mentioned in Question (*a*)?

ವಿಷಯ: ಪಠ್ಯಪುಸ್ತಕಗಳು ಪ್ರಕಟವಾಗದಿರುವುದು.

ಪ್ರ. 104 (144) ಶ್ರೀ ಪಿ. ವರಾಚಂದ್ರರಾವ್ (ಉಲ್ಲಾಳ್).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಒಂದರಿಂದ ಏಳನೆಯ ತರಗತಿಯವರೆಗಿನ ಪಠ್ಯಪುಸ್ತಕಗಳ ಪೈಕಿ ಇನ್ನೂ ಪ್ರಕಟವಾಗದಿರುವ ಸಂಖ್ಯೆ ಎಷ್ಟು ;